<u>ಅಪರ ಸಿವಿಲ್ ನ್ಯಾಯಾಧೀಶರು ಜೆಎಂಎಫ್‌ಸಿ ನ್ಯಾಯಾಲಯ, ಚನ್ನಪಟ್ಟಣ</u>

CC No :1028 /2014

CW.12 PW.7

**ಹೆಸರು :** ಹನುಮಂತೇಗೌಡ
ತಂದೆ : ಹನುಮೇಗೌಡ
ವಯಸ್ಸು : 63 ವರ್ಷ
ಉದ್ಯೋಗ : ನಿವೃತ್ತ ಎ ಎಸ್ ಐ
ವಾಸ : ರಾಮನಗರ.

ಸಾಕ್ಷಿಯನ್ನುಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.
ಮುಖ್ಯ ವಿಚಾರಣೆ ಎ.ಪಿ.ಪಿ ಯವರಿಂದ : ದಿ:16.02.2022

ನಾನು 2011 ರಿಂದ 2019 ಜೂನ್ ವರೆಗೆ ಚನ್ನಪಟ್ಟಣ ಪೂರ್ವ ಪೋಲೀಸ್ ಠಾಣೆಯಲ್ಲಿ ಹೆಚ್ ಸಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ.19.05.2013 ರಂದು ಮದ್ಯಾಹ್ನ 1.45 ಗಂಟೆ ಸಮಯದಲ್ಲಿ ಠಾಣೆಯಲ್ಲಿರುವಾಗ ಪ್ರಾಸಾ-1 ರವರಿಗೆ ಬಂದ ಖಚಿತ ವರ್ತಮಾನದ ಮೇರೆಗೆ ಸಿಬ್ಬಂದಿಯೊಡನೆ ಸರ್ಕಾರಿ ವಾಹನದಲ್ಲಿ ಚನ್ನಪಟ್ಟಣ ಟೌನ್ ಇಸ್ಲಾಮ್ ಪುರ ವಾಸಿ ಅಲೀಮ್ ರವರ ಮನೆಯವರ ಬಳಿ ಹೋದಾಗ ಮನೆಯ ವರಾಂಡದಲ್ಲಿ ಇಟ್ಟಿದ್ದ ಕಬ್ಬಿಣದ ಬ್ಯಾರಲ್ ನಲ್ಲಿ ನೀಲಿ ಬಣ್ಣದ ಸೀಮೆ ಎಣ್ಣೆ ತುಂಬಿದ್ದು, ಪಕ್ಕದಲ್ಲಿಯೇ ನಾಲ್ಕು ಪ್ಲಾಸ್ಟಿಕ್ ಕ್ಯಾನ್‌ಗಳಲ್ಲಿ 25 ಲೀಟರ್ ನೀಲಿ ಸೀಮೆಎಣ್ಣೆಯನ್ನು ವಶಪಡಿಸಿಕೊಂಡು ನಿಪಿ-1 ರಂತೆ ಪಂಚನಾಮೆ ಕ್ರಮ ಜರುಗಿಸಿರುತ್ತೇನೆ. ನಿಪಿ-1 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1 ಡಿ ಎಂದು ಗುರುತಿಸಲಾಯಿತು. ಅಲ್ಲಿಯೇ ಇದ್ದ ದಿಲೀಪ್ ಏಜೆನ್ಸಿಗೆ ಸಂಬಂಧಿಸಿದ ಎರಡು ಚೀಟಿಗಳನ್ನು ವಶಪಡಿಸಿಕೊಂಡಿರುತ್ತೇನೆ. ಸದರಿ ಚೀಟಿಗಳು ಈಗಾಗಲೇ ಮುದ್ದೆ ಮಾಲು 2 ಮತ್ತು 3 ಆಗಿರುತ್ತದೆ. ಆರೋಪಿ ತಲೆ ಮರೆಸಿಕೊಂಡು ಓಡಿ ಹೋಗಿರುತ್ತಾನೆ. ನಂತರ ಠಾಣೆಗೆ ಹಾಜರಾಗಿ ಚಾಸಾ-1 ರವರು ನೀಡಿದ ವರದಿಯ ಮೇರೆಗೆ ಠಾಣಾ ಮೊಕ್ಕದ್ದಮೆ ಸಂಖ್ಯೆ 68/13 ರಂತೆ ಪ್ರಕರಣ ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ವರದಿ ಮತ್ತು ಪ್ರಥಮ

ವರ್ತಮಾನ ವರದಿಯನ್ನು ಕ್ರಮವಾಗಿ ನಿಪಿ-6 ಮತ್ತು ನಿಪಿ-7 ಎಂದು ಗುರುತಿಸಲಾಯಿತು. ನಿಪಿ-6 ಮತ್ತು ನಿಪಿ-7 ರಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ-6 ಎ ಮತ್ತು ನಿಪಿ-7 ಎ ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲುಗಳನ್ನು ಸಾಕ್ಷಿ ನೋಡಿ ಗುರುತಿಸುತ್ತಾರೆ. ನಾನು ತನಿಖಾಧಿಕಾರಿಗಳ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರಃ ಹೆಚ್ ಕೆ ವಕೀಲರಿಂದಃ**

ಚಾಸಾ-*1* ರವರಿಗೆ ಬಂದಂತಹ ವರದಿಯನ್ನು ಠಾಣಾ ರಿಜಿಸ್ಟರ್ ಪುಸ್ತಕದಲ್ಲಿ ನಮೂದು ಮಾಡಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಿಪಿ-*1* ರಂತೆ ಪಂಚನಾಮೆ ಮಾಡುವ ಕಾಲಕ್ಕೆ ಪಂಚರಿಗೆ ನೋಟೀಸ್ ನೀಡಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಘಟನಾ ಸ್ಥಳಕ್ಕೆ ಹೋಗುವಾಗ ಜೊತೆಯಲ್ಲಿ ಬಂದಂತಹ ಸಾರ್ವಜನಿಕರಿಗೆ ನೋಟೀಸ್ ನೀಡಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಅಲೀಮ್ ರವರ ಮನೆಗೆ ಹೋಗುವಾಗ ಯಾವ ರಸ್ತೆಯ ಮೂಲಕ ಹೋಗಿದ್ದು ಎಂದರೆ ಸಾಕ್ಷಿ ನಿಜಾಮಿ ಚೌಕ್ ಮೂಲಕ ನಾವು ಹೋದೆವು. ಸರ್ಕಾರಿ ವಾಹನದ ಸಂಖ್ಯೆ ನನಗೆ ನೆನಪಿಲ್ಲ ಸದರಿ ವಾಹನವನ್ನು ಯಾರು ಚಾಲಾಯಿಸುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಆಲೀಮ್ ರವರ ಮನೆಯ ಡೋರ್ ನಂಬರ್ ನನಗೆ ಗೊತ್ತಿಲ್ಲ. ನಾವು ಸ್ಥಳಕ್ಕೆ ಹೋದ ತಕ್ಷಣ ಸ್ಥಳದ ಭಾವ ಚಿತ್ರ ತೆಗೆದಿದ್ದೀರಾ ಎಂದರೆ ಹೌದು ಎಂದುನುಡಿಯುತ್ತಾರೆ. ಸದರಿ ಚಿತ್ರಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ತನಿಖಾಧಿಕಾರಿಗಳು ಹಾಜರುಪಡಿಸಿರಬಹುದು ನನಗೆ ಗೊತ್ತಿಲ್ಲ. ಎಂಟು ಬ್ಯಾರಲ್ ಗಳು ಇದ್ದು ಅವು ಯಾವ ಕಂಪನಿಗೆ ಸೇರಿದ್ದು ಎಂದರೆ ಸಾಕ್ಷಿ ಯಾವ ಕಂಪನಿಯದು ಎಂದು ನನಗೆ ಗೊತ್ತಿಲ್ಲ. ನಾಲ್ಕು ಪ್ಲಾಸ್ಟಿಕ್ ಕ್ಯಾನ್ ಗಳು ಇತ್ತು ಎಂದು ಹೇಳಿದ್ದು ಅವು ಯಾವ ಕಂಪನಿಗೆ ಎಂದು ನನಗೆ ಗೊತ್ತಿಲ್ಲ. ಸ್ಥಳದಲ್ಲಿ ಸೀಮೆ ಎಣ್ಣೆ ಅಳತೆ ಮಾಡಿದ್ದೀರಾ ಎಂದರೆ ಹೌದು, ಯಾವ ಮಾಪನದಿಂದ ಎಂದರೆ ಲೀಟರ್ ನಿಂದ ಎಂದು ನುಡಿಯುತ್ತಾರೆ. ಸದರಿ ವಿಚಾರವನ್ನು ನಾನು ನಿಪಿ-*1* ರಲ್ಲಾಗಲೀ ನನ್ನ

ಹೇಳಿಕೆಯಲ್ಲಾಗಲೀ ನಮೂದು ಮಾಡಿಲ್ಲ. ನಿಪಿ-1 ಮತ್ತು ನನ್ನ ಹೇಳಿಕೆಯಲ್ಲಿ 750 ಎಂ ಎಲ್ ನ 12 ಗಾಜಿನ ಬಾಟಲ್ ಗಳಲ್ಲಿ ನೀಲಿ ಸೀಮೆ ಎಣ್ಣೆಯನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ ಎಂದು ನಮೂದು ಆಗಿದೆ ಎಂದರೆ ಸರಿ. ನ್ಯಾಯಾಲಯದ ಮುಂದೆ ಇರುವಂತಹ ಬಾಟಲ್‌ಗಳು ಪ್ಲಾಸ್ಟಿಕ್ ನವು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಬಾಟಲ್ ಗಳಿಗೆ ಬಿಳಿ ಬಟ್ಟೆಯಿಂದ ಅದರ ಬಾಯಿ ಕಟ್ಟಿ ಅದರ ಮೇಲೆ ಸಾಕ್ಷಿದಾರರ ಸಹಿ ಪಡೆದುಕೊಂಡಿದ್ದೀರಾ ಎಂದರೆ ಸಹಿ ಪಡೆದುಕೊಂಡಿಲ್ಲ ಎಂದು ನುಡಿಯುತ್ತಾರೆ. ಮುದ್ದೆ ಮಾಲು 2 ಮತ್ತು 3 ನಕಲು ಪ್ರತಿಗಳು ಎಂದರೆ ಇರಬಹುದು ಎಂದು ನುಡಿಯುತ್ತಾರೆ. ಸ್ಥಳದಲ್ಲಿ ನೋಡಿದಂತಹ ಮುದ್ದೆ ಮಾಲು 2 ಮತ್ತು 3 ಗಳು ಅಸಲು ಬಿಲ್ ಗಳು ಎಂದರೆ ಸರಿ. ನಿಪಿ-1 ನ್ನು ನಾನೇ ಬರೆದಿರುತ್ತೇನೆ. ನಿಪಿ-1 ಕ್ಕೆ ಜೋಗಪ್ಪ, ಸಿದ್ದಪ್ಪಾಜೀ, ನಾಗರಾಜು ರವರು ಸಹಿ ಮಾಡಿದ್ದಾರೆ. ನಿಪಿ-1 ನ್ನು ನೀವು ಠಾಣೆಯಲ್ಲಿ ಕುಳಿತು ಬರೆದಿದ್ದು ಎಂದರೆ ಸರಿಯಲ್ಲ. ನಿಪಿ-1 ನ್ನು ಪ್ರಕರಣಕ್ಕಾಗಿ ಸೃಷ್ಟಿ ಮಾಡಿರುವ ದಾಖಲಾತಿ ಎಂದರೆ ಸರಿಯಲ್ಲ. ಸ್ಥಳದ ಚೆಕ್ಕು ಬಂದಿ ನನಗೆ ಗೊತ್ತಿಲ್ಲ. ನಾನು ಘಟನಾ ಸ್ಥಳಕ್ಕೆ ಹೋಗುವುದಕ್ಕೂ ಮೊದಲು ಎಸ್ ಹೆಚ್ ಓ ರವರನ್ನು ನೇಮಿಸಿ ಹೋಗಿದ್ದೆ. ಸ್ಥಳಕ್ಕೆ ಹೋಗಿ ನಿಪಿ-1 ರಂತೆ ಸ್ಥಳ ಮಹರು ಮಾಡಿ ನಂತರ ಠಾಣೆಗೆ ಬಂದು ಸದರಿ ವರದಿಯನ್ನು ನೀವು ನೇಮಕ ಮಾಡಿ ಹೋದಂತಹ ಎಸ್ ಹೆಚ್ ಓರವರಿಗೆ ನೀಡಿ ಅವರಿಂದ ಪ್ರಥಮ ವರ್ತಮಾನ ವರದಿಯನ್ನು ತಯಾರು ಮಾಡಿಸಲು ನಿಮಗೇನಾದರೂ ತೊಂದರೆ ಇತ್ತೇ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಾನೇ ದಾಳಿ ಮಾಡಿ ನಿಪಿ-1 ನ್ನು ಬರೆದು ನಾನೇ ಪ್ರಥಮ ವರ್ತಮಾನ ವರದಿಯನ್ನು ಸಹ ದಾಖಲು ಮಾಡಿದ್ದೇನೆ ಎಂದರೆ ಸರಿ. ನಾನು ಹೇಳಿದ ರೀತಿ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ಮೇಲ್ ಅಧಿಕಾರಗಳ ಮತ್ತು ಚಾಸಾ-1 ಮಾತು ಕೇಳಿಕೊಂಡು ವಾರಸುದಾರರಿಲ್ಲದ ದಾಸ್ತಾನುವಿನ ಮೇಲೆ ಅಂಕಿ ಅಂಶಗಳಿಗೊಸ್ಕರ ಸುಳುಳ ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಭೇಟಿ ನೀಡಿಲ್ಲ ಮತ್ತು ಯಾವುದೇ ಮಹಜರು ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಗೆ ತೊಂದರೆ ಕೊಡುವ

ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸುಳ್ಳ ವರದಿ ಆಧಾರದ ಮೇಲೆ ಸುಳ್ಳು ಪ್ರಥಮ ವರ್ತಮಾನ ವರದಿಯನ್ನು ದಾಖಿಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಒ

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಚನ್ನಪಟ್ಟಣ.